# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **744** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ವಿವಿಧ ವಿದ್ಯುತ್ ಪ್ರಸರಣ ನಿಗಮಗಳಲ್ಲಿ ಕುಂದು ಕೊರತೆ ಸಭೆಯಲ್ಲಿ ದಾಖಲಾಗುವ ದೂರುಗಳು ಎಷ್ಟು; ಅವುಗಳು ಯಾವುವು ದೂರುಗಳನ್ನು ಪರಿಹರಿಸಲು ಏನು ಕ್ರಮ ವಹಿಸಲಾಗಿದೆ ವಿವರ ನೀಡುವುದು; | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕುಂದು ಕೊರತೆ ಸಭೆ/ ಜನಸಂಪರ್ಕ ಸಭೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಸ್ಥಳದಲ್ಲೇ ಬಗೆಹರಿಸಬಹುದಾದ ದೂರುಗಳನ್ನು ಅಲ್ಲಿಯೇ ಬಗೆಹರಿಸಲಾಗುತ್ತದೆ. ಕಾಮಗಾರಿ ನಿರ್ವಹಿಸಬೇಕಾದ ದೂರುಗಳಿಗೆ ಕಂಪೆನಿಯ ವ್ಯವಸ್ಥೆ ಸುಧಾರಣೆಯಡಿಯಲ್ಲಿ ಕಾಮಗಾರಿ ಕೈಗೊಂಡು ಬಗೆಹರಿಸಿ ಗುಣಮಟ್ಟದ ವಿದ್ಯುತ್ ಸರಬರಾಜಿಗೆ ಕ್ರಮ ವಹಿಸಲಾಗುತ್ತಿದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೆಸ್ಕಾಂ ಕುಂದು ಕೊರತೆ ಸಭೆಯಲ್ಲಿ ದಾಖಲಾಗುವ ದೂರುಗಳು ಯಾವುವು; ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಸಂಖ್ಯೆಯ ದೂರುಗಳು ದಾಖಲಾಗುತ್ತಿವೆ ಅವುಗಳನ್ನು ನಿವಾರಿಸಲು ಏನು ಕ್ರಮ ಕೈಗೊಳ್ಳಲಾಗಿದೆ; | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕುಂದುಕೊರತೆ (ಜನಸಂಪರ್ಕ) ಸಭೆಯಲ್ಲಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ದೂರುಗಳು ದಾಖಲಾಗಿರುತ್ತದೆ.<br>• ಹಳೆಯ ತಂತಿ ಬದಲಾವಣೆ.<br>• ಲೋ ವೋಲ್ಟೇಜ್ ಸಮಸ್ಯೆ.<br>• ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸುವ ಬಗ್ಗೆ.<br>• ಬಿಲ್ಲಿನ ವ್ಯತ್ಯಾಸವನ್ನು ಸರಿಪಡಿಸುವ ಬಗ್ಗೆ.<br>• ಹಾಳಾದ ಮಾಪಕ ಬದಲಾಯಿಸುವ ಬಗ್ಗೆ.<br>• ಹೆಚ್ಚುವರಿ ಪರಿವರ್ತಕ ಅಳವಡಿಕೆಯ ಬಗ್ಗೆ |
| ಇ) | ಈ ದೂರುಗಳು ಪರಿಹರಿಸುವಲ್ಲಿ ಬಾಕಿ ಇರುವ ಕಾರಣಗಳೇನು ಹಣಕಾಸಿನ ಕೊರತೆ ಅಥವಾ ಸಿಬ್ಬಂದಿಯ ಕೊರತೆಯೇ ಇಲಾಖೆ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ತಾತ್ಕಾಲಿಕವಾಗಿ ಮತ್ತು ದೀರ್ಘಕಾಲಿಕವಾಗಿ ಕೈಗೊಂಡ ಕ್ರಮಗಳು ಯಾವುವು; | ಇವುಗಳಲ್ಲಿ ಲೋ ವೋಲ್ಟೇಜ್ ಸಮಸ್ಯೆ , ಹಳೆಯ ತಂತಿಗಳ ಬದಲಾವಣೆ, ಹಾಗೂ ಹೆಚ್ಚುವರಿ ಪರಿವರ್ತಕ ಅಳವಡಿಕೆಯ ಬಗ್ಗೆ ಹೆಚ್ಚು ಸಂಖ್ಯೆಯ ದೂರುಗಳು ದಾಖಲಾಗುತ್ತಿವೆ. ಸ್ಥಳದಲ್ಲೇ ಬಗೆ ಹರಿಸಬಹುದಾದ ದೂರುಗಳನ್ನು ಅಲ್ಲಿಯೇ ಬಗೆ ಹರಿಸಲಾಗುತ್ತದೆ. ಕಾಮಗಾರಿ ನಿರ್ವಹಿಸಬೇಕಾದ ದೂರುಗಳಿಗೆ ಕಂಪೆನಿಯ ವ್ಯವಸ್ಥೆ ಸುಧಾರಣೆಯಡಿಯಲ್ಲಿ ಕಾಮಗಾರಿ ಕೈಗೊಂಡು ಬಗೆಹರಿಸಿ ಗುಣಮಟ್ಟದ ವಿದ್ಯುತ್ ಸರಬರಾಜಿಗೆ ಕ್ರಮ ವಹಿಸಲಾಗುತ್ತಿದೆ.<br><br>ಮೆಸ್ಕಾಂನಲ್ಲಿ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಅವಶ್ಯಕತೆಗನುಗುಣವಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ) | ಕರಾವಳಿ ಜಿಲ್ಲೆಗಳಲ್ಲಿ ಹೊರ ಜಿಲ್ಲೆಗಳ ವಿದ್ಯುತ್ ಸಿಬ್ಬಂದಿಗಳು ನೇಮಕವಾಗುತ್ತಿದ್ದು, ಹೆಚ್ಚಿನವರು ಪರೀಕ್ಷಾರ್ಹ ಅವಧಿ ಘೋಷಣೆಯಾದ ಕೂಡಲೇ ತಮ್ಮ ತವರು ಜಿಲ್ಲೆಗಳಿಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಿರುವುದು ಇಲಾಖೆ ಗಮನಿಸಿದೆಯೇ; | ಮೆಸ್ಕಾಂನ ಹೆಚ್ಚಿನ ನಿರ್ವಹಣಾ ಸಿಬ್ಬಂದಿಗಳು ವರ್ಗಾವಣೆಗೊಂಡಿದ್ದರೂ ಸಹಾ ಸಿಬ್ಬಂದಿಗಳ ಕೊರತೆ ಹೊರತಾಗಿಯೂ ಹಾಲಿ ಕಾರ್ಯನಿರತ ಸಿಬ್ಬಂದಿಗಳಿಂದಲೇ ನಿರಂತರ ವಿದ್ಯುತ್ ಪೂರೈಕೆ ಮಾಡಲು ಹಾಗೂ ಗ್ರಾಹಕರ ವಿದ್ಯುತ್ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯುತ್ ಅಡಚಣೆಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.<br><br>ಆದಾಗ್ಯೂ, ಅವಶ್ಯಕತೆಗೆ ಅನುಗುಣವಾಗಿ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆದು ಸಾರ್ವಜನಿಕ ಸೇವೆಯಲ್ಲಿ ವ್ಯತ್ಯಯವುಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. |
| ಉ) | ಈ ಸಮಸ್ಯೆಯನ್ನು ಬಗೆಹರಿಸಲು ವಿದ್ಯುತ್ ಪ್ರಸರಣ ನಿಯಮಗಳಲ್ಲಿ ತಳಹಂತದ ವಿದ್ಯುತ್ ಸಿಬ್ಬಂದಿಗಳ ನೇಮಕವನ್ನು ಆಯಾಯ ವಿಭಾಗಗಳಲ್ಲಿ ಮಾಡಲು ಸರ್ಕಾರಕೆ ಇರುವ ತೊಡಕುಗಳೇನು? (ಈ ಕುರಿತು ಯಾವಾಗ ಕ್ರಮ ವಹಿಸಲಾಗುವುದು) | ಅವಶ್ಯಕತೆಗನುಗುಣವಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಎನರ್ಜಿ 196 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:744ಕ್ಕೆ ಅನುಬಂಧ:**

ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕುಂದು ಕೊರತೆ ಸಭೆ/ ಜನಸಂಪರ್ಕ ಸಭೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ ವಿವರಗಳು ಕೆಳಗಿನಂತಿವೆ:

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:**

| ಕ್ರ ಸಂ. | ವರ್ಷ | ದಾಖಲಾದ ದೂರುಗಳ ಸಂಖ್ಯೆ |
|---|---|---|
| 1 | 2022-23 | 3730 |
| 2 | 2023-24 | 3671 |
| 3 | 2024-25 | 3604 |
| 4 | 2025-26 (ಜೂನ್-25ರವರೆಗೆ) | 860 |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:**

| ಕ್ರ ಸಂ. | ವರ್ಷ | ದಾಖಲಾದ ದೂರುಗಳ ಸಂಖ್ಯೆ |
|---|---|---|
| 1 | 2022-23 | 1650 |
| 2 | 2023-24 | 1315 |
| 3 | 2024-25 | 1521 |
| 4 | 2025-26 (ಜುಲೈ-25ರವರೆಗೆ) | 1076 |

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:**

| ಕ್ರ ಸಂ. | ವರ್ಷ | ದಾಖಲಾದ ದೂರುಗಳ ಸಂಖ್ಯೆ |
|---|---|---|
| 1 | 2022-23 | 950 |
| 2 | 2023-24 | 927 |
| 3 | 2024-25 | 1157 |
| 4 | 2025-26 (ಜೂನ್-25ರವರೆಗೆ) | 297 |

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:**

| ಕ್ರ ಸಂ. | ವರ್ಷ | ದಾಖಲಾದ ದೂರುಗಳ ಸಂಖ್ಯೆ |
|---|---|---|
| 1 | 2022-23 | 2114 |
| 2 | 2023-24 | 3144 |
| 3 | 2024-25 | 3258 |
| 4 | 2025-26 (ಜೂನ್-25ರವರೆಗೆ) | 479 |

**ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ:**

| ಕ್ರ ಸಂ. | ವರ್ಷ | ದಾಖಲಾದ ದೂರುಗಳ ಸಂಖ್ಯೆ |
|---|---|---|
| 1 | 2022-23 | 2813 |
| 2 | 2023-24 | 3110 |
| 3 | 2024-25 | 3090 |
| 4 | 2025-26 (ಜೂನ್-25ರವರೆಗೆ) | 2505 |